

## ಹಳೆ ಬೇರು ಹೊಸ ಚಿಗುರು !

ಬೆಂಗಳೂರು ಮೂಲದ 'ಕಲೆ ನೆಲೆ'ಯ ಜಾಹ್ನವಿ ಕುಲಕರ್ಣಿ ಸಾಂಪ್ರದಾಯಿಕ ಇಳಕಲ್ ಸೀರೆಯ ಗಾಢ ಬಣ್ಣಗಳಿಗೆ ಬದಲಾಗಿ ಕಣ್ಣಿಗೆ ಹಿತವಾದ ಮಧ್ಯಮ ಹಾಗೂ ತಿಳಿ ಬಣ್ಣಗಳ ಸೀರೆಗಳನ್ನು ತಯಾರಿಸುತ್ತಿದ್ದಾರೆ. ಇವರ ಇನ್ನೊಂದು ಪ್ರಯೋಗವೆಂದರೆ ಇಂತಹ ಹಿತಕರ ಬಣ್ಣಗಳ ಸೀರೆಗಳಿಗೆ ಹೊಂದಿಕೊಳ್ಳುವ ಗುಳೇದಗುಡ್ಡದ ಖಣಗಳನ್ನೂ ಈ ಸೀರೆಗಳಿಗೆ ಜೋಡಿಸುವುದು! ಇಂಥ ಅಪರೂಪದ ಸೀರೆಗಳೀಗ 'ಕಲೆ ನೆಲೆ'ಯಲ್ಲಿ ಲಭ್ಯ! ಇತ್ತೀಚೆಗೆ ಈ ಸೀರೆಗಳಿಂದ ತಯಾರಿಸಿದ ಚೂಡಿದಾರ್, ಮಿಡಿ, ಟಾಪ್ ಇತ್ಯಾದಿ ಮಾಡ್ ಡ್ರೆಸ್‌ಗಳು ಯುವಜನರ ಗಮನ ಸೆಳೆಯುತ್ತಿವೆ.

ಶತಶತಮಾನಗಳಿಂದಲೂ ಉತ್ತರ ಕರ್ನಾಟಕ, ಮಹಾರಾಷ್ಟ್ರ, ಸಾಂಪ್ರದಾಯಿಕ ಜನರಿಗೆ ಮಾತ್ರ ಮೀಸಲಾಗಿದ್ದ ಈ ಸೀರೆಗಳು ಇಂದು ಯುವಜನತೆ ಹಾಗೂ ಫ್ಯಾಷನ್ ಪ್ರಿಯರನ್ನೂ ಆಕರ್ಷಿಸುತ್ತಿರುವುದು ಒಂದು ಸಕಾರಾತ್ಮಕ ಬೆಳವಣಿಗೆ. ಆವರ ಮನೆಯಿಂದ ಹೊರ ಬಂದಾಗ ಸಮೀಪದ ಸಿನಿಮಾ ಟಾಕೀಜಿನಿಂದ ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚೆದೆಯಿರಬೇಕೆಂದೆಂದು ಎಂಬ ಅಣ್ಣಾವರ ಹಾಡು ಕೇಳಬರುತ್ತಿತ್ತು ! ಅದೇನೇ ಇರಲಿ, ಕಾಲನ ಪ್ರವಾಹದಲಿ ಕಳೆದು ಹೋಗುತ್ತಿದ್ದ ಈ ಗಣಿ ನಾಡಿನ ಸೊಬಗಿನ ಖಣಿ ಇಳಕಲ್ ಸೀರೆಯ ಭವ್ಯ ಕಲಾಪರಂಪರೆ ಇಂಥದೊಂದು ಕಾಯಕಲ್ಪಕ್ಕಾಗಿ ಕಾಯುತ್ತಿದೆ!

ಜುಗಲ್‌ಬಂದಿ! ಈ ಸೀರೆಗಳನ್ನು ಸಾಮಾನ್ಯವಾಗಿ ಶುದ್ಧ ರೇಷ್ಮೆ, ಹತ್ತಿ ಹಾಗೂ ರೇಷ್ಮೆ ಮತ್ತು ಹತ್ತಿಗಳೆರಡರಿಂದಲೂ ನೇಯಲಾಗುತ್ತದೆ. ರೇಷ್ಮೆಯ ಬದಲು ಚಮಕಾವನ್ನು (ಆರ್ಟ್ ಸಿಲ್ಕ್) ಬಹಳಷ್ಟು ಸಲ ಉಪಯೋಗಿಸುತ್ತಾರೆ. ಈ ಸೀರೆಯ ವೈಶಿಷ್ಟ್ಯವೆಂದರೆ ಒಡಲಿನ ಹಾಸು ಹಾಗೂ ಸೆರಗಿನ ಹಾಸುಗಳನ್ನು 'ಕೊಂಡಿ' ಎಂಬ ತಂತ್ರದಿಂದ ಜೋಡಿಸಿರುವುದು. ಇದರಿಂದ ಕಾಟನ್ ಒಡಲು ಹಾಗೂ ರೇಷ್ಮೆ ಸೆರಗನ್ನು ಹಾಗೂ ಶುದ್ಧ ರೇಷ್ಮೆಯ ಒಡಲಿಗೆ ರೇಷ್ಮೆ ಸೆರಗನ್ನು ಜೋಡಿಸಲಾಗುವುದು.

ತೋಪ್ ತೆನಿ (ಜೋಳದ ತೆನೆ) ಎಂಬ ತುಂಬಾ ವಿಶಿಷ್ಟವಾದ ಜನಪ್ರಿಯ ವಿನ್ಯಾಸ! ಈ ವಿನ್ಯಾಸದಲ್ಲಿರುವ ಮೂರು ಭಾಗಗಳಲ್ಲಿ ಕೆಂಪು ಹಾಗೂ ಮಧ್ಯದ ಎರಡು ಭಾಗಗಳಲ್ಲಿ ಬಿಳಿ ಬಣ್ಣವನ್ನು ಕಾಣಬಹುದು (ಇತ್ತೀಚಿನ ದಿನಗಳಲ್ಲಿ ಬೇರೆ ಬಣ್ಣಗಳನ್ನೂ ಉಪಯೋಗಿಸಲಾಗುತ್ತಿದೆ). ಸಾಂಪ್ರದಾಯಿಕ ಇಳಕಲ್ ಸೀರೆಗಳಲ್ಲಿ ತೊಪ್ ತೆನೆಯ ವಿನ್ಯಾಸ ಇರಲೇಬೇಕು. ಟ್ರೇಡ್ ಮಾರ್ಕ್ ತರಹ! ದೇವಾಲಯದ ಗೋಪುರ, ರಥ, ಕಮಲ, ಪ್ರಾಣಿಗಳು, ಶಂಖ ಇತ್ಯಾದಿ ಇನ್ನಿತರ ವಿನ್ಯಾಸಗಳು. ಆದರೆ, ಈ ವಿನ್ಯಾಸಗಳು ಸಾಂಪ್ರದಾಯಿಕ ವಿನ್ಯಾಸಗಳೆನಿಸುವುದಿಲ್ಲ! ಈ ವಿನ್ಯಾಸ ಒಂದು ಸಾಮಾಜಿಕ ಪ್ರತಿಷ್ಠೆಯ ಸಂಕೇತವೂ ಹೌದು.

ತೆನೆಗಳ ವಿನ್ಯಾಸವಿರುವ ಅಂಚುಗಳು 46 ಇಂಚುಗಳಷ್ಟು ಅಗಲವಾಗಿದ್ದು, ಗಾಢವಾದ ಉಜ್ವಲ ಬಣ್ಣಗಳನ್ನೂ ಹೊಂದಿರುತ್ತದೆ. ಜನಪ್ರಿಯ ಸಾಂಪ್ರದಾಯಿಕ ಅಂಚುಗಳಂದರೆ ಚಿಕ್ಕಿ, ಗೋಮಿ, ಫಾರಸ್ ಪೇಟ್. ಗಾಯತ್ರಿ ಎಂಬುದು ಈಗ ಚಾಲ್ತಿಯಲ್ಲಿರುವ ವಿನ್ಯಾಸ. ದಾಳಿಂಬೆ, ಕೆಂಪು, ಗಿಳಿಹಸಿರು, ನವಿಲು ಹಸಿರು, ನೇರಲೆ, ಗಾಢ ನೀಲಿ ಹಾಗೂ ಅಪರೂಪದ ಕಪ್ಪು ಬಣ್ಣಗಳಲ್ಲಿ ದೊರೆಯುವ ಈ ಸೀರೆಗಳು ಅಂಚಿನಲ್ಲಿ ಕೆಂಪು, ಕಂದು, ಹಸಿರು ಹಾಗೂ ಬಿಳಿ ಬಣ್ಣಗಳನ್ನು ಹೊಂದಿರುತ್ತವೆ. ವಧುವಿಗಾಗಿ ತಯಾರಿಸಿದ ಸೀರೆಗಳನ್ನು ಗಿರಿ ಕುಮುಕುಮ್ ಎಂಬ ನಿರ್ದಿಷ್ಟ ಬಣ್ಣದಿಂದ ತಯಾರಿಸಲಾಗುತ್ತದೆ. ಆಸಿಡ್ ಹಾಗೂ ವ್ಯಾಟ್ ಬಣ್ಣಗಳನ್ನು ಇಲ್ಲಿ ಬಳಸಲಾಗುತ್ತದೆ. ನೈಸರ್ಗಿಕ ಬಣ್ಣಗಳ ಬಗ್ಗೆ ಆಕರ್ಷಣೆ ಇತ್ತೀಚೆಗಷ್ಟೆ ಮತ್ತೆ ಹೆಚ್ಚುತ್ತಿದೆ.



### ಕಸೂತಿ ಕೆಲಸ

ಆರು, ಎಂಟು ಒಂಬತ್ತು ಗಜದ ಸೀರೆಗಳನ್ನು ಇಲ್ಲಿ ನೇಯಲಾಗುತ್ತದೆ. 'ಕುಣಿ ಮಗ್ಗ' ಎಂದು ಕರೆಯಲ್ಪಡುವ 'ಪಿಟ್ ಲೂಮುಗಳು' ಇಲ್ಲಿ ಸಾಮಾನ್ಯ. ಒಂದು ಉತ್ತಮ ಇಳಕಲ್ ಸೀರೆಯನ್ನು ನೇಯಲು ಒಬ್ಬ ನೇಕಾರ ಹಾಗೂ ಇಬ್ಬರು ಸಹಾಯಕರಿಗೆ 5–6 ದಿನಗಳು ಬೇಕು. ಸೀರೆಯ ಒಡಲಲ್ಲಿ ಆಯತಾಕಾರ, ಚೌಕಳಿ, ಪಟ್ಟಾ ಪಟ್ಟಿ ವಿನ್ಯಾಸಗಳು ಸಾಮಾನ್ಯವಾಗಿದ್ದು, ಇವೆಲ್ಲ ಇಲ್ಲದ ಸಾದಾ ಸೀರೆಗಳೂ ಲಭ್ಯ. ಕಸೂತಿ ಕೆಲಸವಿರುವ ಸೀರೆಗಳು ತುಂಬಾ ಜನಪ್ರಿಯ. ಈ ಸೀರೆಗಳಿಗೆ ಹಾಕುವ ಕಸೂತಿ ವಿಶೇಷ ತರಹದ್ದು. ರಥಗಳು, ಆನೆಗಳು, ಕಮಲಗಳು, ದೀಪಗಳು, ಪಲ್ಲಕ್ಕಿಗಳ ವಿನ್ಯಾಸಗಳು ಈ ಕಸೂತಿಯಲ್ಲಿ ಮೂಡಿ ಬರುತ್ತವೆ. ಗಂಟುಗಳನ್ನು ಹಾಕದೇ ಇರುವುದರಿಂದ ಬಟ್ಟೆಯ ಎರಡೂ ಕಡೆ ಕಸೂತಿ ಒಂದೇ ರೀತಿಯಲ್ಲಿ ಕಾಣುತ್ತದೆ.

ಭಾರತದಲ್ಲಿ ಕೃಷಿ ಹಾಗೂ ನೇಕಾರಿಕೆ ಅತಿ ದೊಡ್ಡ ಕೈಗಾರಿಕೆಗಳಾದರೂ ಕೂಡ ಮೂಲತ ಕೃಷಿಕ ಹಾಗೂ ನೇಕಾರ ಇಬ್ಬರೂ ಕಷ್ಟ ಜೀವಿಗಳೇ. ಕೆಲಸ ಸಾಕಷ್ಟು, ಗಳಿಕೆ ಇಷ್ಟೇ ಇಷ್ಟು. ಕಡಿಮೆ ಉತ್ಪಾದಕತೆ, ಸೂಕ್ತ ಮಾರುಕಟ್ಟೆಯ ಕೊರತೆ, ಕಡಿಮೆ ಕೂಲಿ ದರ, ಅಸಂಘಟಿತ ಉದ್ಯಮ, ಕಚ್ಚಾ ವಸ್ತುವಿನ ಕೊರತೆ, ಹಣಕಾಸಿನ ಸಮಸ್ಯೆ, ಸಾಲದ ಸುಳಿ, ಬ್ಯಾಂಕುಗಳಲ್ಲಿ ಸುಲಭವಾಗಿ ದೊರಕದ ಸಾಲ, ಪ್ರಚಾರದ ಕೊರತೆ, ನೇಕಾರಿಕೆಯಿಂದ ವಿಮುಖರಾಗುತ್ತಿರುವ ಯುವಜನತೆ, ನೇಕಾರರ ಆರೋಗ್ಯ ಸಮಸ್ಯೆ, ಎಲ್ಲಕ್ಕೂ ಮುಖ್ಯವಾಗಿ ಯಾಂತ್ರಿಕ ಮಗ್ಗಗಳ ಪೈಪೋಟಿ ಇತ್ಯಾದಿ ಸಮಸ್ಯೆಗಳು ಈ ಉದ್ಯಮದ ಮೇಲೆ ಕರಿನೆರಳನ್ನು ಚಾಚಿವೆ. ಈ ಯಾಂತ್ರಿಕ ಯುಗದಲ್ಲೂ ನವನಾಗರಿಕ ಫ್ಯಾಷನ್ ಜಗತ್ತಿನೊಡನೆ ತೀವ್ರ ಪೈಪೋಟಿಯನ್ನು ಎದುರಿಸುತ್ತ ಸಾಂಪ್ರದಾಯಿಕ ಚಲುವಿನಿಂದ ತನ್ನದೇ ಆದ ಬಹು ದೊಡ್ಡ ಗ್ರಾಹಕರ ಬಳಗವನ್ನು ಹೊಂದಿರುವ. ತಲೆ ತಲಾಂತರಗಳಿಂದ ಸೀರೆಗಳನ್ನು ನೇಯ್ದು ತಮ್ಮ ಬದುಕನ್ನು ರೂಪಿಸಿಕೊಂಡ ನೂರಾರು ಕುಟುಂಬಗಳು ಇಲ್ಲಿವೆ! ಸರಕಾರ ಇವರಿಗಾಗಿ ಅನೇಕ ಕಲ್ಯಾಣ ಯೋಜನೆಗಳನ್ನು ಮಾಡಿದ್ದರೂ ಈ ಯೋಜನೆಗಳು ಇವರಿಗೆ ಸರಿಯಾಗಿ ತಲುಪಿ ಸದುಪಯೋಗವಾಗಬೇಕಷ್ಟೆ! ■